ಆ) ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರಗಳು ನೀರಾವರಿಗೆ ಒಳಪಡಿಸುವ ಸಾಮರ್ಥ್ಯದ ಹಾಗೂ ರಸ್ತೆ ನಿರ್ಮಾಣಕ್ಕಾಗಿ ಹೊಂದಿದ ಗುರಿ ಮತ್ತು ಅವೆರಡರಲ್ಲೂ ಸಾಧಿಸಿದ ಪ್ರಗತಿ (ವಿವರಗಳನ್ನು ಒದಗಿಸುವುದು)

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಮತ್ತು ನೀರಾವರಿ ಸಚಿವರು).— ಆ) ರಾಜ್ಯದಲ್ಲಿ ೫ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರಗಳಿವೆ. ೧೯೮೭-೮೮ನೇ ಸಾಲಿನಲ್ಲಿ ಪರಿಷ್ಕೃತ ಯೋಜನೆಯಂತೆ ಪ್ರದೇಶಾಭಿವೃದ್ಧಿ ಪ್ರಾಧಿಕಾರಕ್ಕೆ ಕೆಳಕಂಡಂತೆ ಹಣವನ್ನು ಒದಗಿಸಲಾಗಿದೆ.

		(ಲಕ್ಷ ರೂ.ಗಳಲ್ಲಿ)
೧.	ಕಾಡಾ, ತುಂಗಭದ್ರಾ ಯೋಜನೆ	ರೂ. ೨೮೮.೦೦
೨.	ಕಾಡಾ, ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು	ರೂ. ೩೯೩.೮೦
೩.	ಕಾಡಾ, ಕಾವೇರಿ ಕಣಿವೆ ಯೋಜನೆ	ರೂ. ೩೭೮.೫೦
೪.	ಕಾಡಾ, ಕೃಷ್ಣಾ ಮೇಲ್ದಂಡೆ ಯೋಜನೆ	ರೂ. ೧೧೫೩.೦೦
೫.	ಕಾಡಾ, ಭದ್ರಾ ಯೋಜನೆ	ರೂ. ೫೨.೫೦
	ಒಟ್ಟು	ರೂ. ೨೨೬೦.೮೦

ಆ) ೧೯೮೭-೮೮ರ ಗುರಿ ಮತ್ತು ಸಾಧಿಸಿದ ಪ್ರಗತಿ ಕೆಳಕಂಡಂತಿದೆ.

ಕಾಡಾ ಪ್ರಾಧಿಕಾರ	ಹೊಲಗಾಲುವೆ		ರಸ್ತೆಗಳು	
	ಗುರಿ (ಹೆ)	ಪ್ರಗತಿ (ಹೆ)	ಗುರಿ (ಮೀಟರ್)	ಪ್ರಗತಿ
೧. ತುಂಗಭದ್ರಾ ಯೋಜನೆ	೧೭೫೦	೧೫೫೫	೧೭೦೦೦	೧೭೦೦೦
೨. ಮಲಪ್ರಭಾ ಮತ್ತು ಘಟಪ್ರಭಾ ಯೋಜನೆ	೯೮೦೮	೪೪೦೮	೮೦೦೦	೧೦೨೦
೩. ಕಾವೇರಿ ಜಲಾನಯನ ಯೋಜನೆ	೧೪೧೨೬	೫೮೮೩	೩೮೦೦೦	೧೭೬೦೦
೪. ಕೃಷ್ಣಾ ಮೇಲ್ದಂಡೆ ಯೋಜನೆ	೧೫೫೪೪	೯೧೭೮	—	—
೫. ಭದ್ರಾ ಯೋಜನೆ	೬೦೩	೬೪೩	೪೪೯೦೦	೪೭೯೧೧
ಒಟ್ಟು	೪೨೭೬೧	೨೧೬೩೭	೧೦೭೯೦೦	೮೩೫೧೧

ಕೃಷ್ಣಾ ಮೇಲ್ದಂಡೆ ಯೋಜನೆ

೧೨೮೭. ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ (ಗುರುಮಿಠಕಲ್),— ಮಾನ್ಯ ಕಂದಾಯ ಯೋಜನೆ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಆ) ೧೯೮೭-೮೮ನೇ ಸಾಲಿಗಾಗಿ ಕೃಷ್ಣಾ ಮೇಲ್ದಂಡೆ ಯೋಜನೆಗೆ ಮಂಜೂರಾದ ಹಣ, ಬಿಡುಗಡೆ ಮಾಡಿದ ಮತ್ತು ಇಲ್ಲಿಯವರೆಗೆ ಖರ್ಚಾದ ಹಣ ಎಷ್ಟು (ಇದರಲ್ಲಿ ಎಲುವೆ ಮತ್ತು ಆಣೆಕಟ್ಟುಗಳ ಮೇಲೆ ಆದ ವೆಚ್ಚವನ್ನು ಬೇರೆಯಾಗಿ ಕೊಡಬೇಕು)

ಆ) ೧೯೮೭-೮೮ನೇ ಸಾಲಿನಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಗೆ ಸರ್ಕಾರದ ಗುರಿಯೊಂದಿಗೆ ಸಾಧಿಸಿದ ನೀರಾವರಿ ಸಾಮರ್ಥ್ಯವೆಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಮತ್ತು ನೀರಾವರಿ ಸಚಿವರು).—

ಆ) ೧೯೮೭-೮೮ನೇ ಸಾಲಿನ ವಿವರಗಳು ಈ ರೀತಿ ಇದೆ.

೧.	ಆಯವ್ಯಯದಂತೆ ನಿಗದಿಪಡಿಸಿದ ಹಣ	೮೫ ಕೋಟಿ ರೂಪಾಯಿಗಳು
೨.	ಪರಿಷ್ಕರಿಸಿದ ಪೊತ್ತು	೪೨. ೫೧ ಕೋಟಿ ರೂಪಾಯಿಗಳು
೩.	ಬಿಡುಗಡೆ ಮಾಡಿದ ಹಣ	೪೩. ೪೭ ಕೋಟಿ ರೂಪಾಯಿಗಳು
೪.	ವೆಚ್ಚ	೪೩. ೪೭ ಕೋಟಿ ರೂಪಾಯಿಗಳು

ಕಾಲುವೆ ಮತ್ತು ಅಣೆಕಟ್ಟುಗಳಿಗೆ ವೆಚ್ಚವಾದ ಹಣ ಕ್ರಮವಾಗಿ ೨೨.೯೦ ಕೋಟಿ ರೂ.ಗಳು ಮತ್ತು ೧೧.೪೨ ಕೋಟಿ ರೂ.ಗಳು (ಭೂಸ್ವಾಧೀನ, ಕಟ್ಟಡಗಳು, ಮತ್ತು ಇತರೇ ವೆಚ್ಚ ಸೇರಿ, ಆದರೆ ಸಿಬ್ಬಂದಿ ವೆಚ್ಚ ಬಿಟ್ಟಿ)

ಆ) ೧೯೮೭-೮೮ನೇ ಸಾಲಿಗೆ ಮೊದಲು ನಿಗದಿಪಡಿಸಿದ ನೀರಾವರಿ ಸಾಮರ್ಥ್ಯದ ಗುರಿ ೧೬,೭೦೦ ಹೆಕ್ಟೇರುಗಳು. ಮುಂದೆ ಇದನ್ನು ೬೫೭೦ ಹೆಕ್ಟೇರುಗಳಿಗೆ ಪರಿಷ್ಕರಿಸಲಾಯಿತು. ಸಾಧನೆ ೪೭೭೩ ಹೆಕ್ಟೇರುಗಳು.

ರಾಜ್ಯದಲ್ಲಿ ತೆಂಗಿನ ಬೆಳೆಯ ವಿಸ್ತರಣೆ

೨೨೩೪. ಶ್ರೀಮತಿ ಮನೋರಮಾ ಮಧ್ವರಾಜ್ (ಉಡುಪಿ).— ಮಾನ್ಯ ವಿದ್ಯುತ್ ಮತ್ತು ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ತೆಂಗಿನ ಬೆಳೆಯ ಒಟ್ಟು ವಿಸ್ತೀರ್ಣ ಎಷ್ಟು ? (ಜಿಲ್ಲಾವಾರು ಮಾಹಿತಿ ಒದಗಿಸುವುದು)

ಆ) ತೆಂಗು ಬೆಳೆ ವಿಸ್ತರಣೆಗೆ ನೀಡುತ್ತಿರುವ ಪ್ರೋತ್ಸಾಹ ಏನು ?